# ಸೋಲು ಗೆಲುವು ಹಾವು ಏಣಿಯಾಟ



**ರಾಘವೇಂದ್ರ ರೈ**
**ಝೀ ಕನ್ನಡ**
**'ಕಾಮಿಡಿ ಕಿಲಾಡಿಗಳು' ನಟ**

◆ ಹಾಸ್ಯ ಕಲೆ ನಿಮಗೆ ಸಿದ್ಧಿಸಿದ್ದು ಹೇಗೆ?

ನಾನು ವೃತ್ತಿ ರಂಗಭೂಮಿ ಕಲಾವಿದ. ನನ್ನ ತಂದೆ 'ಶ್ರೀ ನಂದಿಕೇಶ್ವರ ನಾಟಕ ಸಂಘ, ಮಂಗಳೂರು' ಎಂಬ ಕಂಪನಿಯನ್ನು ಕಟ್ಟಿದ್ದರು. ದಕ್ಷಿಣ ಕನ್ನಡದಲ್ಲಿ ಇದ್ದ ಏಕೈಕ ಕಂಪನಿ ಅದಾಗಿತ್ತು. ಮಂಗಳೂರು, ಉಡುಪಿ, ಕಾಸರಗೋಡು, ಬೆಂಗಳೂರು, ಮುಂಬೈ ಸೇರಿದಂತೆ ವಿವಿಧ ಕಡೆ ಸಂಚರಿಸಿ ನಾಟಕವನ್ನು ಪ್ರದರ್ಶನ ಮಾಡುತ್ತಿದ್ದರು. ಸುಮಾರು 25 ವರ್ಷ ಕಂಪನಿ ನಡೆಸುವಷ್ಟರಲ್ಲಿ ಅವರಿಗೆ ಅನಾರೋಗ್ಯ ಕಾಡಲು ಶುರುವಾಯಿತು. ಆಗ ನಾನು ಮತ್ತು ಅಮ್ಮ ಕಂಪನಿಯ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೇವೆ. ಅಲ್ಲಿಂದಲೇ ಬಣ್ಣವನ್ನು ಹಚ್ಚಿದೆ. ಅಪ್ಪ ಕೂಡ ಹಾಸ್ಯ ಕಲಾವಿದರಾಗಿದ್ದರು. ಈ ಎಲ್ಲದರ ಪ್ರಭಾವವು ನನ್ನ ಮೇಲೆ ಆಗಿರಬಹುದು.

◆ 'ಪಂಚರಂಗಿ ಪೋಂ ಪೋಂ' ನಂತರ ಕಾಣೆಯಾಗಿದ್ದು ಏಕೆ?

ಸುವರ್ಣದ 'ಪಂಚರಂಗಿ ಪೋಂ ಪೋಂ' ಮಂಗಳೂರು ಮೀನುನಾಥ ಪಾತ್ರದ ಮೂಲಕ ಜನಪ್ರಿಯತೆ ಸಿಕ್ಕಿತ್ತು. ನಂತರ 'ಶ್ರೀಮಾನ್ ಶ್ರೀಮತಿ' ಸೀರಿಯಲ್ ಮಾಡಿದೆ. ಅದಾದ ಮೇಲೆ 'ಭೂಮಿಕಾ' ಎಂಬ ಸಿನಿಮಾವನ್ನು ಕನ್ನಡ ಮತ್ತು ತುಳು ಭಾಷೆಯಲ್ಲಿ ಮಾಡಿದೆವು. ಅದಕ್ಕೆ ಬಂಡವಾಳ ಹಾಕಿದ್ದರಿಂದ ದೊಡ್ಡ ಪೆಟ್ಟು ಬಿತ್ತು. ಸೆನ್ಸಾರ್ ಕೂಡ ಆಗಿದೆ. ಇನ್ನೇನು ಪ್ರಮೋಶನ್ ಆರಂಭಿಸಬೇಕು ಅನ್ನುವಾಗ ಕೋವಿಡ್, ಲಾಕ್ ಡೌನ್ ಎಂದು ಏನೂ ಮಾಡಲಾಗಲಿಲ್ಲ. ಹಾಗೆ ಸ್ಥಗಿತವಾಗಿದ್ದ ಅದಕ್ಕೆ ಈಗ ಚಾಲನೆ ಸಿಗುವ ಶುಭ ಸೂಚನೆ ಸಿಕ್ಕಿದೆ ನೋಡಬೇಕು.

◆ ಝೀ ಕನ್ನಡ ಕಾಮಿಡಿ ಟ್ರ್ಯಾಕ್ ಹೇಗಿದೆ?

ಇಲ್ಲಿಗೆ ಬರುವಾಗ ಎಲ್ಲ ಕಳೆದುಕೊಂಡು ಸೋತು ಬಂದಿದ್ದೆ. ಈ ವೇದಿಕೆಗೆ ಬಂದ ಮೇಲೆ ನನ್ನ ಅದೃಷ್ಟವೋ ಏನೋ ನಮ್ಮ ಸಿನಿಮಾ ಬಿಡುಗಡೆ ಮಾಡುವ ಬಗ್ಗೆ ನಿರ್ದೇಶಕರು ಯೋಚಿಸಿದ್ದಾರೆ. ಕಳೆದುಕೊಂಡಿದ್ದೆಲ್ಲ ಸಿಗುವ ಭರವಸೆ ಇಲ್ಲಿ ಮೂಡಿದೆ. ನಾಲ್ಕೈದು ವರ್ಷದ ನಂತರ ನಟನೆಯನ್ನು ಮತ್ತೆ ಆರಂಭಿಸಿದ್ದೇನೆ. ನಟನೆಗೆ ಅವಕಾಶವೂ ಸಿಗುವ ಸುಳಿವು ಸಿಗುತ್ತಿದೆ. ಇಲ್ಲಿಗೆ ಬರುವ ತನಕ ನನ್ನ ಪಾಲಿಗೆ ದಾರಿಗಳೆಲ್ಲ ಬಂದ್ ಆಗಿದ್ದವು. ಈಗ ದಾರಿಗಳು ಕಾಣಿಸುತ್ತಿವೆ.

◆ ಓವರ್ ಆಕ್ಟ್ ಮಾಡುತ್ತಿದ್ದೀರಿ ಎನ್ನುವ ಆರೋಪದಿಂದ ಮುಕ್ತವಾಗುವುದು ಹೇಗೆ?

ಏನೋ ಒಂದು ಪ್ರತಿಕ್ರಿಯೆ ಬರುತ್ತಿದೆ ಅಂದರೆ ನಾವು ಏನೋ ಮಾಡುತ್ತಿದ್ದೇವೆ ಎಂದು ಅರ್ಥ. ನಮಗೆ ಭಾನುವಾರ ಮಾತ್ರ ಚಿತ್ರೀಕರಣ ಇರುತ್ತದೆ. ವಾರದ ಉಳಿದ ದಿನ ರೂಪಕದ ತಾಲೀಮು ಮಾಡುತ್ತೇವೆ. ಹಾಗೆ ನಾವು ಆಕ್ಟ್ ಮಾಡಲೇಬೇಕಾಗುತ್ತದೆ. ನಿರ್ದೇಶಕರು ಸೂಚನೆಯನ್ನೂ ಹಾಗೆಯೇ ಕೊಟ್ಟಿರುತ್ತಾರೆ. ಹಾಗೆ ಮಾಡದಿದ್ದರೆ 'ಈ ನನ್ನಮಕ್ಕಳು ಏನೂ ಮಾಡಿಲ್ಲ' ಅಂತಾರೆ. ಅದು ಚೆನ್ನಾಗಿರುವುದಕ್ಕೆ ವಿಮರ್ಶೆ ಬರುತ್ತದೆ. ಕುಡಿಯುವ ಸನ್ನಿವೇಶ ಇದ್ದೇ ಇರುತ್ತದೆ. ಅದನ್ನೂ ನಾವು ನಗು ನಗುತ್ತಾ ಜಾಲಿಯಾಗಿ ಅಭಿನಯಿಸುತ್ತೇವೆ. ಇದೆಲ್ಲ ಸ್ವಾಭಾವಿಕವಾಗಿ ಬರುತ್ತಿದೆಯೇ ವಿನಃ ಮಾಡಲೇಬೇಕು ಎಂಬ ಒತ್ತಡದಿಂದ ಅಲ್ಲ. ಜನರು ಎಂಜಾಯ್ ಮಾಡಿರುವುದರಿಂದ ಏನಾದರೂ ಒಂದು ಅಭಿಪ್ರಾಯ ಬರುತ್ತದೆ.

◆ ರಂಗಭೂಮಿ ಬಿಟ್ಟು ಬೆಂಗಳೂರಿಗೆ ಬಂದ ಸನ್ನಿವೇಶ ಹೇಗಿತ್ತು?

ನಾವು ಚಿಕ್ಕವರಿದ್ದಾಗ ನಮ್ಮ ನಾಟಕ ನೋಡಲು ಜನ ಸಾಗರವೇ ಸೇರಿದಂತೆ ಕಾಣಿಸುತ್ತಿತ್ತು. ಆಗ ಟೀವಿ ಮಾಧ್ಯಮದ ಪ್ರಭಾವ ತುಂಬ ಕಡಿಮೆ ಇತ್ತು. ಇದ್ದರೂ ವಾರಾಂತ್ಯದಲ್ಲಿ ಮಾತ್ರ ಸ್ವಲ್ಪ ಹೊತ್ತು ಪ್ರಸಾರವಾಗುತ್ತಿತ್ತು. ಮನರಂಜನೆಗೆ ನಾಟಕವನ್ನು ಜನ ಅವಲಂಬಿಸಿದ್ದರು. ತಂದೆಯ ಅಗಲಿಕೆಯ ಸಮಯಕ್ಕಾಗಲೇ ಟೀವಿಯಲ್ಲಿ ಬೇರೆ ಬೇರೆ ವಾಹಿನಿಗಳು ತಲೆ ಎತ್ತಿದವು. ನಂತರ ನಮ್ಮ ಆದಾಯ ಮೂಲದಲ್ಲಿಯೂ ಕುಸಿತ ಆಯಿತು. ಆಗ ಚಾಲಕನಾಗಿಯಾದರೂ ಕೆಲಸ ಮಾಡಿಕೊಂಡು ಇರೋಣ ಎಂದು ದುಬೈಗೆ ಹೋದೆ. ಅಲ್ಲಿ ನನಗೆ ಇರಲು ಸಾಧ್ಯ ಆಗಲಿಲ್ಲ. ಸಮಸ್ಯೆ ಆಗಿದ್ದರಿಂದ ಬೆಂಗಳೂರಿಗೆ ಬಂದೆ. 2012ರಲ್ಲಿ 'ಪಂಚರಂಗಿ ಪೋಂ ಪೋಂ' ಅವಕಾಶ ಸಿಕ್ಕಿತು. 2015ರವರೆಗೆ ತುಂಬ ಚೆನ್ನಾಗಿತ್ತು. ಅಷ್ಟರಲ್ಲಿ ನಮ್ಮ ತಾಯಿ ಕ್ಯಾನ್ಸರ್‌ಗೆ ಬಲಿಯಾದರು. ಅದಾದ ಮೇಲೆ ಏನೂ ಬೇಡ ಎಂದು ಸುಮ್ಮನಿದ್ದೆ. ಹೀಗಿದ್ದವನಿಗೆ ಮರುಜೀವ ಎನ್ನುವಂತೆ ಈ ಪಾತ್ರ ನನ್ನ ಪಾಲಿಗೆ ಬಂದಿದೆ.

◆ ಮುಂದಿನ ನಿಮ್ಮ ದಾರಿ ಬಗ್ಗೆ ಏನು ಹೇಳ್ತೀರಿ?

ಝೀ ವಾಹಿನಿ ಕೈ ಹಿಡಿಯುತ್ತದೆ. ಈಗ ಯಾವ ಅವಕಾಶ ಸಿಕ್ಕರೂ ಮಾಡ್ತೀನಿ. ಈ ಮಧ್ಯದಲ್ಲಿ ಅವಕಾಶಗಳೇ ಇರಲಿಲ್ಲ. 'ಕಾಮಿಡಿ ಕಿಲಾಡಿಗಳು' ನಂತರ ನನ್ನ ಅದೃಷ್ಟದ ಬಾಗಿಲು ತೆರೆದಂತೆ ಆಗಿದೆ. ಯಾವ ಪಾತ್ರವಾದರೂ ಮಾಡಿ ಜೀವನವನ್ನು ಸಾಗಿಸಿದರೆ ಸಾಕು. ಬಣ್ಣ ಹಾಕುವುದನ್ನು ಬಿಟ್ಟರೆ ಬೇರೆ ಏನೂ ಗೊತ್ತಿಲ್ಲ. ನಂಬಿಕೆ ಇಟ್ಟುಕೊಂಡು ಬಂದಿದ್ದೇನೆ. ಜೀವನದಲ್ಲಿ ತಪ್ಪು ಮಾಡಿದ್ದಿದೆ. ಯಾವುದೇ ಹಂತದಲ್ಲಿ ನಾನು ಸೋತಾಗ ಸರಸ್ವತಿ ಯಾವುದೋ ರೂಪದಲ್ಲಿ ಕೈ ಹಿಡಿಯುತ್ತಾಳೆ ಎಂದು ಭಾವಿಸಿದ್ದೇನೆ. ಯಾವುದಾದರೂ ಒಂದು ಅವಕಾಶ ಸಿಗುತ್ತೆ. ಯಾರೇ ಅವಮಾನ ಮಾಡಿದರೂ ತಾಳ್ಮೆಯಿಂದ ಇದ್ದೆ. ಈಗ ಉತ್ತರ ಕೊಡುವ ಮಟ್ಟಿಗೆ ಬಂದಿದ್ದೇನೆ. ಊರಲ್ಲಿ ಜನ ಸನ್ಮಾನಕ್ಕೆಂದು ಕರೆಯುತ್ತಿದ್ದಾರೆ. ಇಲ್ಲಿ ನಕ್ಕು ನನ್ನೆಲ್ಲ ನೋವನ್ನು ಮರೆತು ಬದುಕುತ್ತಿದ್ದೇನೆ.

■ **ರಾಘವೇಂದ್ರ ಕೆ.**